SM – 001

ಎರಡನೇ ಸೆಮಿಸ್ಟರ್ ಬಿ.ಎ./ಬಿ.ಹೆಚ್.ಎಂ. ಪರೀಕ್ಷೆ, ಮೇ/ಜೂನ್ 2010
(ಸೆಮಿಸ್ಟರ್ (Freshers) ಸ್ಕೀಂ)
ಕನ್ನಡ ಭಾಷೆ – II
(ಭಾಗ – 1) (ಸಾಹಿತ್ಯ ಸಂವಾದ – 1)

Time : 3 Hours Max. Marks : 90

ಭಾಗ – 1

I. 1) ಐದು ಪದಗಳಿಗೆ ಅರ್ಥ ಬರೆಯಿರಿ. (1×5=5)

ಆನನ, ಸೂನು, ರುಚಿರ, ಕಡುಗು, ಕರಣ, ಪುರ್ಚು, ಮಚ್ಚರ.

2) ಐದು ಪದಗಳಿಗೆ ನಾನಾರ್ಥ ಬರೆಯಿರಿ. (1×5=5)

ಸಂಧಿ, ವರ, ಬಲ, ಅರಿ, ಕಾಲ, ಭವ, ಆಳಿ.

3) ಐದು ಪದಗಳನ್ನು ಬಳಸಿ ವಾಕ್ಯಗಳನ್ನು ರಚಿಸಿ. (1×5=5)

ವಿಲಾಪ, ಹೋರಾಟ, ಯುಕ್ತಿ, ಎಚ್ಚರ, ವೈರಾಗ್ಯ, ಭೀಕರ, ಪ್ರಸಿದ್ಧಿ

4) ಐದು ಪದಗಳ ಗ್ರಾಂಥಿಕ ರೂಪವನ್ನು ತಿಳಿಸಿ. (1×5=5)

ಕೂಗುತ್ತೈತೆ, ಹಾಕೈತೆ, ಗೊಡವ್ಯಾಕ, ಸಿಸು, ಬೂಮ್ತಾಯಿ, ಬ್ಯಾಸರ, ನಾಸ್ನ

5) ನಾಲ್ಕು ಜೋಡಿ ಪದಗಳನ್ನು ಬರೆಯಿರಿ. (1×4=4)

6) ಎರಡು ಗಾದೆಗಳನ್ನು ವಿಸ್ತರಿಸಿ ಬರೆಯಿರಿ. (2×3=6)

1) ಮನಸ್ಸಿದ್ದರೆ ಮಾರ್ಗ
2) ಅತ್ತೆಗೊಂದು ಕಾಲ ಸೊಸೆಗೊಂದು ಕಾಲ
3) ಹಾಸಿಗೆಯಿದ್ದಷ್ಟು ಕಾಲು ಚಾಚು.

ಭಾಗ – 2

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (4×5=20)

1) ಯುದ್ಧವನ್ನು ಎದುರಿಸಲು ಬೇಕಾದ ಮನೋಸ್ಥೈರ್ಯಕ್ಕಾಗಿ ಬೇಡುವ ಪರಿ "ಬಾಗ್ದಾದ್ : ಒಂದು ಪ್ರಾರ್ಥನೆ" ಯಲ್ಲಿ ಹೇಗೆ ಮೂಡಿ ಬಂದಿದೆ ? ತಿಳಿಸಿ.

2) 'ಏಳುಕನ್ನಿಕೆಯರು' ಪ್ರತಿನಿಧಿಸುವ ವಿಭಿನ್ನ ಅನುಭವಗಳನ್ನು ನಿರೂಪಿಸಿ.

P.T.O.

3) '' ದೆವ್ವಗಳು'' ನಿಜವೋ, ಸುಳ್ಳೋ 'ಕಾಲಕ್ಷೇಪಣೆ' ಯ ನೆಲೆಯಲ್ಲಿ ವಿವರಿಸಿ.

4) ಕಷ್ಟಸಹಿಷ್ಣುತೆ, ಸಹನಶೀಲತೆಗಳಿಂದ ಸನತ್ಕುಮಾರ ಇಂದ್ರ ಪದವಿ ಪಡೆದ ಬಗೆಯನ್ನು ತಿಳಿಸಿ.

5) ವಿಷಕನ್ಯೆಯನ್ನು ಚಂದ್ರಗುಪ್ತನ ಬಳಿ ಕಳುಹಿಸಿದವರಾರು ? ಆ ಅಪಾಯವನ್ನು ಚಾಣಕ್ಯನು ಯಾವ ರೀತಿ ತಪ್ಪಿಸಿದನು ವಿವರಿಸಿ.

6) ವಿಷ್ಣುಶ್ರೀ ಯಾರು ? ಅವಳ ದುರಂತ ಕಥೆಯನ್ನು ತಿಳಿಸಿ.

## ಭಾಗ – 3

III. **ಎರಡು** ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. **(2×10**

1) ದುರ್ಯೋಧನನ ಮಡುಗಟ್ಟಿದ ದುಃಖ ಅವನ ವಿಲಾಪದಲ್ಲಿ ಹೇಗೆ ಹರಿದು ಬಂದಿದೆ ? ವಿವರಿಸಿ.

2) 'ಒಂದು ಕವಿತೆ' ಯಲ್ಲಿನ ವಿಡಂಬನೆಯ ಸ್ವಾರಸ್ಯವನ್ನು ವಿವರಿಸಿ.

3) ಕೌಟುಂಬಿಕ ಘಟನೆಗಳು ವ್ಯಕ್ತಿತ್ವದ ಮೇಲೆ ಬೀರುವ ಪರಿಣಾಮಗಳನ್ನು 'ಕನ್ನಡಿ ಮನೆ' ಹೇಗೆ ಬಿಂಬಿಸಿದೆ ? ಚಿತ್ರಿಸಿ

4) 'ಮೂಗು' ವರವೋ ? ಶಾಪವೋ ? ವಿವೇಚಿಸಿ.

## ಭಾಗ – 4

IV. **ಎರಡು** ಪ್ರಶ್ನೆಗಳಿಗೆ ಸ್ವಂತ ಆಲೋಚನೆಯ ಹಿನ್ನೆಲೆಯಲ್ಲಿ ಉತ್ತರಿಸಿ. **(2×10**

1) 'ರಾವಣನ ಪಶ್ಚಾತ್ತಾಪ' 'ದಶಾನನ ಸ್ವಪ್ನ ಸಿದ್ಧಿ' ಯಲ್ಲಿ ವ್ಯಕ್ತವಾಗಿರುವುದನ್ನು ನಿರೂಪಿಸಿ.

2) ''ಮನುಷ್ಯ ಚರಿತ್ರೆಗೆ ಬಂಧಿ'' ಎಂಬ ಮಾತನ್ನು 'ಚರಿತ್ರೆಯ ಪ್ರಶ್ನೆ ಪತ್ರಿಕೆ' ಕವಿತೆಯ ಮೂಲಕ ವಿವೇಚಿಸಿ.

3) ವಿಮಾನದಲ್ಲಿ ದಿಢೀರನೆ ಕಂಡ ವ್ಯಕ್ತಿಯ ಬಗ್ಗೆ ಅಲ್ಲಿದ್ದ ಇತರರು ಏನೆಂದು ಭಾವಿಸಿದರು ? ವಿವರಿಸಿ.

4) ಯುದ್ಧಕ್ಕೆ ನಾವು ಹೇಗೆ ಜವಾಬ್ದಾರರು ? ಆಧುನಿಕ ಯುದ್ಧಗಳ ಹಿನ್ನೆಲೆಯಲ್ಲಿ ಈ ಮಾತನ್ನು ವಿವೇಚಿಸಿ.

06 DJA 20009



**SM – 00**

# ಎರಡನೇ ಸೆಮಿಸ್ಟರ್ ಬಿ.ಎ.ಪರೀಕ್ಷೆ, ಮೇ/ಜೂನ್ 2010
## (ಸೆಮಿಸ್ಟರ್ (Repeaters) ಸ್ಕೀಂ)
## ಕನ್ನಡ ಭಾಷೆ – II
## (ಹುಯ್ಯಲವೊ ಡಂಗುರವ ಮತ್ತು ಕಿರಗೂರಿನ ಗಯ್ಯಾಳಿಗಳು)

Time : 3 Hours — Max. Marks : 9

1. ಅ) ಕೆಳಗಿನವುಗಳಲ್ಲಿ ಒಂದರ ಭಾವವನ್ನು ವಿವರಿಸಿ. **(1×5=**

   1) ನಾನೂ ನಿನ್ನ ಜತೀಗೆ ಸೇರ್ತಿನಿ ;
   ನಿನ್ನಂಥೋರ ಜತೀಗೆ ಸೇರ್ತಿನಿ
   ನಿಮ್ಮಂಥಾಗ್ತೀನಿ :
   ಇನ್ನ ಮೇಲ ನಾನು ಜಂಗಮ ಅಲ್ಲ
   ನೀನು ಶಿಷ್ಯ ಅಲ್ಲ, ಏನಪಾ.

   2) ರೋಷದಿಂದ ಕುದೀತಿದ್ದ ನಾನು ನುಗ್ಗಿ
   ಅವನ್ನ ಕೊಚ್ಚಿ ಹಾಕಿದೆ, ಇನ್ನಿಬ್ಬರು
   ಬಂದರು, ಅವರನ್ನೂ ತರಿದು ಹಾಕಿದೆ.

   ಆ) **ಮೂರು** ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ. **(3×3=**

   1) ಊರಿಡೀ ತಿರುಗಿದ್ರೂ ಸಿಕ್ತಿದ್ದಿದ್ದು, ಎರಡು ಪಾವಲಿ.
   2) ಅಂವ ಶ್ರೀಮಂತರನ್ನ ಬಡದು ಬಡವರನ್ನ ಸಾಕ್ತಾನ.
   3) ಭಲೆ, ಹುಡುಗ ನೀನು ಖರೆ ಗಂಡಸದಿ.
   4) ಅದ್ರಾಗೇನೈತಿ ತಪ್ಪುದಂಡ ಕಟ್ಟೀದ್ರಾತು.
   5) ನಮ್ಮ ರಾಜಕೀಯ ಬಾಳ ಚಲೋ ಅದ್ರಾಗ ಡಿಪಿಕ್ಟ ಆಗ್ಯದ.
   6) ನೀನು ನಿನ್ನ ಪೂರ್ವಾಶ್ರಮಕ್ಕ ತಿರುಗು ಏನಪಾ ।

   ಇ) **ಮೂರಕ್ಕೆ** ಟಿಪ್ಪಣಿ ಬರೆಯಿರಿ. **(3×2=**

   1) ಕಾಲಜ್ಞಾನ
   2) ಪೋಲೀಸ್
   3) ಬಿಡ್ಡಳ್ಳಿ
   4) ಸ್ವಾಮಿ
   5) ಜೋಳಿಗೆ
   6) ಎಪಿಕ್ ರಂಗಭೂಮಿ

II. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ. **(4×5=**

1) ಜಂಗಮಯ್ಯನ ಕಾಲಜ್ಞಾನ
2) ಜುಂಜ ಮತ್ತು ಪೋಲೀಸ್ ನಡುವಿನ ಸಂವಾದ
3) ಹುಡುಗ-ಹುಡುಗಿ ನಡುವಿನ ಸಂವಾದ
4) ಜಂಗಮ ಹೇಳುವ ಸತ್ಯವಂತರ ಸರಕಾರ
5) ಸ್ವಾಮಿ-ಬಸವಣ್ಣಪ್ಪ ನಡುವಿನ ಮಾತುಕತೆ
6) ಪಕ್ಷಾಂತರ ರಾಜಕೀಯ.

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ. **(2×10=**

1) ಭೂತ – ವರ್ತಮಾನಗಳ ಮುಖಾಮುಖಿ ನಾಟಕದಲ್ಲಿ ವ್ಯಕ್ತಗೊಳ್ಳುವ ಬಗೆಯನ್ನು ಚರ್ಚಿಸಿ.
2) ಸಾಮಾಜಿಕ – ರಾಜಕೀಯ ಸಂಘರ್ಷಗಳ ಅಭಿವ್ಯಕ್ತಿ ವಿಧಾನ ನಾಟಕದಲ್ಲಿ ನಿರೂಪಿತವಾಗಿರುವ ಬಗೆ ಹೇಗೆ ?
3) ಹುಡುಗ – ಹುಡುಗಿಯ ನಡುವೆ ಪ್ರೀತಿಯುಂಟಾಗಿ ಮದುವೆಯಾಗುವುದು ಸಾಮಾಜಿಕ ಪರಿವರ್ತನೆಯ ಸೂಚಕವೆ ? ಹೇ
4) ಜುಂಜ, ಹುಲ್ಲುಹಳ್ಳಿ , ಸಂಗಪ್ಪ, ಶಿಷ್ಯ–ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

IV. ಐದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **(5×1=**

1) ಶಂಕ್ರಪ್ಪ ತನ್ನ ಸಾಂದ್ರ ಬೇಸಾಯದ ಪ್ರಯೋಗಕ್ಕೆ ಯಾರನ್ನು ಒಪ್ಪಿಸಿದ ?
2) ಕಾಳೇಗೌಡನ ಹೆಂಡತಿ ಓಡಿಹೋದದ್ದು ಯಾರೊಂದಿಗೆ ?
3) ಕೃಷ್ಣೇಗೌಡನ ಬಳಿ ಇದ್ದ ಆನೆ ಎಲ್ಲಿಯದು ?
4) ಹೆಚ್ಚಿನ ಕೆಲಸವಿದ್ದಾಗ ಕೃಷ್ಣೇಗೌಡ ಆನೆಗೆ ಏನನ್ನು ಬಹುಮಾನವಾಗಿ ಕೊಡುತ್ತಿದ್ದ ?
5) 'ಇದು ಡೆತ್‌ಕಣ್ರೀ' ಎಂದು ಹೇಳಿದ್ದು ಯಾವುದನ್ನು ಕುರಿತು ?
6) ರಣಹದ್ದಿನ ಎಲುಬಿನಲ್ಲಿ ಮಾಡಿದ ವೀಣೆಯ ಹೆಸರೇನು ?
7) ರಂಗಮ್ಮ ಹೇಗೆ ನಿಂತಿದ್ದಳು ?

V. ಒಂದು ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ. **(1×5=**

1) ದಿಮ್ಮಿ ಉರುಳಿ ಕುರುಚಲು ಕಾಡಿಗೆ ನುಗ್ಗಿದ ರೀತಿ.
2) ವೇಲಾಯುಧ ಆನೆಯನ್ನು ಆರೈಕೆ ಮಾಡುವ ಬಗೆ.

VI. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **(2×10=2**

1) ಬಿರುಗಾಳಿಯ ಆರ್ಭಟದಿಂದ ಆರಂಭವಾದ ಹೆಣ್ಣುಗಳ ಬಂಡಾಯದ ಮನಸ್ಥಿತಿ ಕುರಿತು ಬರೆಯಿರಿ.
2) ಮೂಡಿಗೆರೆ ನಗರದ ಬದುಕಿನ ತಲ್ಲಣಗಳು 'ಕೃಷ್ಣೇ ಗೌಡನ ಆನೆ ' ಕಥೆಯಲ್ಲಿ ಹೇಗೆ ನಿರೂಪಿತವಾಗಿದೆ ?
3) ಸೈಕಲ್ ಕಲಿಯಬೇಕೆನ್ನುವ ಲೇಖಕರ ಸಣ್ಣ ಕುತೂಹಲ ಅದ್ಭುತ ವಿಶ್ವವೊಂದರ ಅರಿವಿಗೆ ಕಾರಣವಾಗುವ ಪರಿ ಹೇಗೆ ?
4) ದೆವ್ವದ ಅಸ್ತಿತ್ವದ ಹುಡುಕಾಟ 'ಮಾಯಾಮೃಗ ಕಥೆ ' ಯಲ್ಲಿ ಹೇಗೆ ನಿರೂಪಿತವಾಗಿದೆ ?